ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/02/ಎಲ್ಆರ್‌ಡಿಸಿ/2018-19 / 2504

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 15-12-2018.

## -:ಸುತ್ತೋಲೆ:-

ವಿಷಯ: 2018-19 ನೇ ಸಾಲಿನ "42ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ದಲ್ಲಿ ಪಾಲ್ಗೊಳ್ಳಲು ನೋಂದಣಿ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:1. ದಿನಾಂಕ:04-01-2018 ರಂದು ನಿರ್ದೇಶಕರ ಕೊಠಡಿಯಲ್ಲಿ ನಡೆದ ಕ್ರೀಡಾ ಸಮಿತಿಯ ಸಭೆಯ ನಡವಳಿಗಳು.

2. ಸುತ್ತೋಲೆ ಸಂಖ್ಯೆ: ಡಿಟಿಇ/02/ಎಲ್ಆರ್‌ಡಿಸಿ/2017-18 ದಿನಾಂಕ: 13.11.2018.

((((()))))

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2) ರಲ್ಲಿ, 2018-19 ನೇ ಸಾಲಿನ "42 ನೇ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟ" ವನ್ನು ದಿನಾಂಕ: 01-02-2019 ರಿಂದ 03-02-2019 ರವರೆಗೆ ಶ್ರೀಮತಿ ಎಲ್ ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ, ಇಲ್ಲಿ ನಿರ್ದೇಶನಾಲಯದ ಸಹಯೋಗದಲ್ಲಿ ಆಯೋಜಿಸಲಾಗುವುದು ಎಂದು ತಿಳಿಸಿ, ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲು ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿತ್ತು. ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸುವವರು ತಮ್ಮ ತಮ್ಮ ಸಂಸ್ಥೆಗಳಲ್ಲಿ ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳನ್ನು ಆಯ್ಕೆಮಾಡಿ, ಜಿಟಿಇ ಲಿಂಕ್ ನಲ್ಲಿ **ದಿನಾಂಕ: 15.01.2019 ರ ಸಂಜೆ 4.00** ಗಂಟೆ ಯೊಳಗಾಗಿ ನೊಂದಣಿ ಮಾಡಿಕೊಳ್ಳಲು ಈ ಮೂಲಕ ಸೂಚಿಸಲಾಗಿದೆ. ನೊಂದಣಿ ಮಾಡಿಕೊಳ್ಳುವ ಪ್ರಕ್ರಿಯೆ ದಿನಾಂಕ: 18.12.2018 ರಿಂದ ಪ್ರಾರಂಭವಾಗುವುದು. ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಸಂಸ್ಥೆಯವರು ಖಡ್ಡಾಯವಾಗಿ ಕ್ರೀಡಾಕೂಟದಲ್ಲಿ ಬಾಗವಹಿಸಲು ಸಹ ಸೂಚಿಸಲಾಗಿದೆ.

ಮುಂದುವರಿದು ರಾಜ್ಯ ಮಟ್ಟದ ಅಂತರ ಪಾಲಿಟೆಕ್ನಿಕ್ ಕ್ರೀಡಾಕೂಟದಲ್ಲಿ ವಿಜೇತರಾದ ಕ್ರೀಡಾಪಟುಗಳನ್ನು 2019ರ ಮಾರ್ಚ ತಿಂಗಳಿನಲ್ಲಿ ತಮಿಳುನಾಡು ರಾಜ್ಯದಲ್ಲಿ ಆಯೋಜಿಸುತ್ತಿರುವ South Zone inter Polytechnic Sports and Games meet ಗೆ ನಿಯೋಜಿಸಲಾಗುವುದು, ಸದರಿ ಮಾಹಿತಿಯನ್ನು ವಿದ್ಯಾರ್ಥಿಗಳ ಗಮನಕ್ಕೆ ತರಲು ಸಹ ಸೂಚಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ನಿರ್ದೇಶನಾಲಯದ ಮತ್ತು ಶ್ರೀಮತಿ ಎಲ್ ವಿ ಸರ್ಕಾರಿ ಪಾಲಿಟೆಕ್ನಿಕ್‌ನ ಕೆಳಕಂಡ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

1. ಶ್ರೀ ಡಿ ಹೆಚ್ ಜಗದೀಶ್, ಅಭಿವೃದ್ಧಿ ಅಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. **ಮೊಬೈಲ್ ಸಂಖ್ಯೆ** - 9900180652.
2. ಶ್ರೀ ವೈ ಕೆ ಸತ್ಯನಾರಾಯಣ, ಪ್ರಾಂಶುಪಾಲರು, ಮೊಬೈಲ್ ಸಂಖ್ಯೆ- 9590265359.
3. ಶ್ರೀ ಹೆಚ್ ಎಸ್ ಜಗದೀಶ್, ಉಪನ್ಯಾಸಕರು, ಮೊಬೈಲ್ ಸಂಖ್ಯೆ- 9448033725.
4. ಶ್ರೀ ಡಿ ಹೆಚ್ ವಸಂತ್ ಕುಮಾರ್, ವಿಭಾಗಾಧಿಕಾರಿಗಳು, ಮೊಬೈಲ್ ಸಂಖ್ಯೆ-9449005804.
5. ಶ್ರೀ ಅರುಣ್ ದೇವದಾಸ್, ಉಪನ್ಯಾಸಕರು, ಮೊಬೈಲ್ ಸಂಖ್ಯೆ- 9731212208
6. ಶ್ರೀ ಹೆಚ್ ಪಿ ಚಂದನ್, ಉಪನ್ಯಾಸಕರು, ಮೊಬೈಲ್ ಸಂಖ್ಯೆ- 9448772292
7. ವೆಬ್‌ಸೈಟ್:-www.dte.kar.nic.in
8. ವೆಬ್‌ಸೈಟ್:www.slvphassan.in

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:

1. ರಾಜ್ಯದ ಎಲ್ಲಾ ಸರ್ಕಾರಿ/ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಪ್ರಾಂಶುಪಾಲರು, ಶ್ರೀಮತಿ ಎಲ್ ವಿ ಸರ್ಕಾರಿ ಪಾಲಿಟೆಕ್ನಿಕ್, ಹಾಸನ, ಇವರ ಮಾಹಿತಿಗಾಗಿ.
3. ಇ-ಗೌರ್ವನೆನ್ಸ್ ವಿಭಾಗಕ್ಕೆ ಸೂಕ್ತ ಕ್ರಮಕ್ಕಾಗಿ.